


# ವೃದ್ಧೆಯ ಉಪಕಾರ

ಬ್ರಹ್ಮಪುರವೆಂಬ ಪಟ್ಟಣದ ಜನರು ತುಂಬಾ ಭಯಭೀತರಾಗಿದ್ದರು. ಏಕೆಂದರೆ ಸಮೀಪದಲ್ಲಿದ್ದ ಪರ್ವತದ ತುದಿಯಲ್ಲಿ ಘಂಟಾಕರ್ಣನೆಂಬ ರಾಕ್ಷಸನಿರುವನೆಂದು ಅವರು ನಂಬಿದ್ದರು. ಆ ಪ್ರದೇಶದಲ್ಲಿ ಆಗಾಗ ಗಂಟೆಯ ಸಪ್ಪಳವೂ ಕೇಳಿಬರುತ್ತಿತ್ತು. ಆದ್ದರಿಂದ ಯಾರೂ ಆ ಕಡೆ ಸುಳಿಯುತ್ತಿರಲಿಲ್ಲ. ಘಂಟಾಕರ್ಣನು ಜನರನ್ನು ತಿನ್ನುತ್ತಾನೆ ಎಂಬ ಸುದ್ದಿ ಹಬ್ಬಲು ಜನರು ಊರು ಬಿಟ್ಟು ಹೋಗತೊಡಗಿದರು.

ಅಲ್ಲಿಯ ಅರಸನು ಬಹಳ ಚಿಂತಾಕ್ರಾಂತನಾದನು. ಯಾರಾದರೂ ಘಂಟಾಕರ್ಣನ ಕಾಟವನ್ನು ತಪ್ಪಿಸಿದರೆ ಹೇರಳ ಹಣವನ್ನು ಕೊಡುವುದಾಗಿ ಅರಸ ಡಂಗುರ ಸಾರಿಸಿದನು. ಯಾರೂ ಆ ಸಾಹಸಕ್ಕೆ ಹೊರಡಲಿಲ್ಲ. ಕೊನೆಗೆ ಒಬ್ಬಳು ವೃದ್ಧೆಗೆ ಡಂಗುರದ ಸುದ್ದಿ ತಿಳಿಯಿತು. ಅವಳು ಜನರ ಮಾತನ್ನು ನಂಬಲಿಲ್ಲ. ತನ್ನ ದೈವವನ್ನು ಪರೀಕ್ಷಿಸಬೇಕೆಂದು ಅವಳು ಧೈರ್ಯದಿಂದ ಕಾಡಿಗೆ ಹೊರಟಳು. ಬಹುದೂರ ನಡೆದಾಗ ದೂರದಲ್ಲಿದ್ದ ಮರದ ಮೇಲಿನ ಮಂಗಗಳು ಗಂಟೆ ಬಾರಿಸುತ್ತಿರುವುದು ಕಣ್ಣಿಗೆ ಬಿತ್ತು. ವೃದ್ಧೆಗೆ ನಿಜಸ್ಥಿತಿಯ ಅರಿವಾಯಿತು.

ಕೂಡಲೇ ವೃದ್ಧೆಯು ರಾಜನ ಬಳಿಗೆ ಬಂದು 'ಘಂಟಾಕರ್ಣನ ಕಾಟವನ್ನು ನಾನು ತಪ್ಪಿಸುವೆನು' ಎಂದಳು. ಅರಸನಿಗೆ ಆಶ್ಚರ್ಯವಾಯಿತು. ಏಕೆಂದರೆ ಇಂತಹ ಧೈರ್ಯವನ್ನು ಇದುವರೆಗೆ ಯಾರೂ ಮಾಡಿರಲಿಲ್ಲ. ಆದ್ದರಿಂದ ವೃದ್ಧೆಯ ಮಾತಿಗೆ ಅರಸ ಒಪ್ಪಿದ.

ವೃದ್ಧೆಯು ಅಡವಿಗೆ ಧೈರ್ಯದಿಂದ ನಡೆದಳು. ಈಗಂತೂ ಅವಳಿಗೆ ಯಾವ ಅಂಜಿಕೆಯೂ ಇರಲಿಲ್ಲ. ಗಂಟೆಯನ್ನು ಬಾರಿಸುತ್ತ ಕೋತಿಗಳು ಕುಳಿತ ಮರದಡಿಗೆ ಬಂದು, ನೆಲದ ಮೇಲೆ ಹಣ್ಣು– ಹಂಪಲುಗಳನ್ನು ಹರವಿದಳು. ಕೂಡಲೇ ಮರದ ಮೇಲಿದ್ದ ಕಪಿಗಳು ಗಂಟೆಯನ್ನು ಎಸೆದು ಹಣ್ಣು ತಿನ್ನಲೆಂದು ಕೆಳಗೆ ಬಂದವು. ವೃದ್ಧೆಯು ಗಂಟೆಯನ್ನು ತೆಗೆದುಕೊಂಡು ಹೋಗಿ ಬಿಟ್ಟಳು. ಅಂದಿನಿಂದ ಮುಂದೆಂದೂ ಗಂಟೆಯ ಸದ್ದು ಯಾರಿಗೂ ಕೇಳಿಬರಲಿಲ್ಲ. ಅರಸನು ಸಂತುಷ್ಟನಾಗಿ ಅವಳಿಗೆ ಹೇರಳ ಸಂಪತ್ತನ್ನು ನೀಡಿದನು. ಪ್ರಜೆಗಳು ವೃದ್ಧೆಯ ಉಪಕಾರವನ್ನು ನೆನೆಯುತ್ತ ನೆಮ್ಮದಿಯಿಂದಿದ್ದರು. ಆದ್ದರಿಂದ ಯಾವುದನ್ನೂ ಸಂಪೂರ್ಣವಾಗಿ ವಿಚಾರ ಮಾಡದೆ ನಂಬಬಾರದು.

ಸಂಗ್ರಹ: **ಪ್ರಸಾದ್ ಮೈರ್ಕಳ**

## ನಿಮಗೆಷ್ಟು ಗೊತ್ತು

### ರಸಪ್ರಶ್ನೆ

1 ಜಗತ್ತಿನ ಎತ್ತರವಾದ ಏಕ ಶಿಲಾ ವಿಗ್ರಹ
ಶ್ರವಣಬೆಳಗೊಳದ ಗೊಮ್ಮಟೇಶ್ವರ

2 ಕರ್ನಾಟಕಕ್ಕೆ 'ಪರಮವೀರ ಚಕ್ರ' ತಂದುಕೊಟ್ಟ ವೀರ ಕನ್ನಡಿಗ
ಕರ್ನಲ್ ವಸಂತ್

3 ಕರ್ನಾಟಕದ ಅತಿದೊಡ್ಡ ದೇವಾಲಯ
ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯ

4 ಕರ್ನಾಟಕದ ಅತಿ ಎತ್ತರವಾದ ಶಿಖರ
ಮುಳ್ಳಯ್ಯನ ಗಿರಿ.

5 ಮೈಸೂರು ಅರಮನೆಯ ಹೆಸರು
ಅಂಬಾವಿಲಾಸ ಅರಮನೆ

6 ಕರ್ನಾಟಕಕ್ಕೆ ಮೊದಲು ಕಾಫಿ ಬೀಜವನ್ನು ತಂದವರು
ಬಾಬಾ ಬುಡನ್ ಸಾಹೇಬ

7 ಕರ್ನಾಟಕದ ಮೊದಲ ಉಪಲಬ್ಧ ಶಾಸನ
ಹಲ್ಮಿಡಿ ಶಾಸನ

8 ಕರ್ನಾಟಕದ ರಾಜ್ಯ ಪಕ್ಷಿ
ನೀಲಕಂಠ ಪಕ್ಷಿ

9 ಕರ್ನಾಟಕದ ಮೊದಲ ಮುಖ್ಯಮಂತ್ರಿ
ಕೆ.ಸಿ.ರೆಡ್ಡಿ

ಸಂಗ್ರಹ: **ಹನುಮಂತ ಮ. ದೇಶಕುಲಕರ್ಣಿ**






# ಬೆಳಗು

ಕೋಳಿಯ ಕೂಗದು ಕೇಳಿಸಿತು,
ಹಿರಿಯರ ಹಿತನುಡಿ ನೆನಪಾಯ್ತು
ಆಕಡೆ ಈಕಡೆ ಹೊರಳಿದೆನು
ಕಿಟಕಿಯ ಆಚೆಗೆ ನೋಡಿದೆನು

ಕೈಗಳನುಜ್ಜುತ ನೋಡಿದೆನು
ದೇವರ ಮಂತ್ರವ ಹೇಳಿದೆನು
ಬಲಗಡೆ ತಿರುಗುತ ಎದ್ದಿಹೆನು
ಕನಸನು ಕೂಡಲೆ ಮರೆತಿಹೆನು

ಗಂಟೆಯು ಆಗಲೆ ಆರಾಯ್ತು,
ನಿದ್ದೆಯು ಕೂಡಲೆ ಹಾರೋಯ್ತು
ಶೌಚಾಲಯವನು ಸೇರಿದೆನು
ಮೂತ್ರವಿಸರ್ಜನೆ ಮಾಡಿದೆನು

ಬಚ್ಚಲು ಮನೆಗೂ ತಲುಪಿದೆನು
ಹಲ್ಲು, ನಾಲಿಗೆ ಉಜ್ಜಿದೆನು
ಮುಖವನು ತೊಳೆದು ಬಂದಿಹೆನು
ದೇವರ ಚಿತ್ರಕೆ ನಮಿಸಿದೆನು

ಮನೆಯಿಂದಾಚೆಗೆ ಸಾಗಿದೆನು
ಹಕ್ಕಿಯ ಚಿಲಿಪಿಲಿ ಕೇಳಿದೆನು
ಹಸಿದಿಹ ಕಾಗೆಯು ಅರಚಿತ್ತು
ಗೆಳೆಯರನು ಜೊತೆಗೆ ಕರೆದಿತ್ತು

ಮೇಕೆಯ ಮರಿಯದು ಜಿಗಿದಿತ್ತು
ಎಮ್ಮೆಯ ಕರುವೂ ಕೂಗಿತ್ತು
ಅಂತೂ ಇಂತೂ ಬೆಳಗಾಯ್ತು
ಲೋಕಕೆ ಸೂರ್ಯನ ದಿಕ್ಕಾಯ್ತು

**- ಕೆ.ಎಸ್.ಚಂದ್ರಶೇಖರಯ್ಯ,**
**ಚಾಂಪಲ್ಲಿ**

# ಬುದ್ಧಿವಂತ ಬಾಲಕ

ಇನ್ನೂರು ವರ್ಷಗಳ ಹಿಂದೆ ಚಂದ್ರತೇಜ ಎಂಬ ಒಬ್ಬ ಬಾಲಕನಿದ್ದ. ಆತ ಬಡ ಕುಟುಂಬದಲ್ಲಿ ಹುಟ್ಟಿದವನಾಗಿದ್ದ. ಒಬ್ಬ ಶ್ರೀಮಂತನ ಬಳಿ ಮನೆ ಕೆಲಸ ಮಾಡುತ್ತಿದ್ದ ಚಂದ್ರತೇಜ ತನ್ನ ಯಜಮಾನನ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಿದ್ದ. ಯಜಮಾನ ದಯಾಳು ಆಗಿದ್ದ. ಒಂದು ದಿನ ಚಂದ್ರತೇಜನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಒಂದು ಕುರಿಯನ್ನಿತ್ತು 'ಇದನ್ನು ಕೊಂದು ಇದರ ಶರೀರದಿಂದ ಒಳ್ಳೆಯ ಭಾಗಗಳನ್ನು ತೆಗೆದುಕೊಂಡು ಬಾ' ಎಂದು ತಿಳಿಸಿದ.




ಚಂದ್ರತೇಜ ಕುರಿಯನ್ನು ಕೊಂದು ಅದರ ಹೃದಯ ಮತ್ತು ನಾಲಿಗೆಯನ್ನು ಕತ್ತರಿಸಿ ಯಜಮಾನನ ಮುಂದೆ ಇಟ್ಟ.

ಮರುದಿನ ಯಜಮಾನ ಮತ್ತೊಂದು ಕುರಿಯನ್ನು ಕೊಟ್ಟು ಅದರ ಶರೀರದಿಂದ ಕೆಟ್ಟ ಅಂಗಗಳನ್ನು ತರುವಂತೆ ಹೇಳಿದ. ಅದರ ಶರೀರದಿಂದ ಹೃದಯ ಮತ್ತು ನಾಲಿಗೆಯನ್ನೇ ಕತ್ತರಿಸಿ ಯಜಮಾನನ ಮುಂದೆ ತಂದಿಟ್ಟ. ಯಜಮಾನ ಅದನ್ನು ನೋಡಿ 'ಈ ಅಂಗಗಳನ್ನು ನೀನು ಈ ಮೊದಲೇ ತಂದಿದ್ದೀಯಲ್ಲ' ಎಂದ.

'ಶರೀರದಲ್ಲಿರುವ ಒಳ್ಳೆಯ ಮತ್ತು ಕೆಟ್ಟ ಅಂಗಗಳು ಇವೇ ಆಗಿವೆ ಯಜಮಾನರೇ, ಹೃದಯ ನಿರ್ಮಲವಾಗಿದ್ದು, ನಾಲಿಗೆ ಹತೋಟಿಯಲ್ಲಿದ್ದರೆ ಆಗ ಶರೀರದ ಎಲ್ಲಾ ಅಂಗಗಳಿಗಿಂತಲೂ ಹೃದಯ ಮತ್ತು ನಾಲಿಗೆಯೇ ಒಳ್ಳೆಯವು. ಆದರೆ ಹೃದಯವು ಕಲ್ಮಶದಿಂದ ಕೂಡಿದ್ದು ನಾಲಿಗೆಯು ಹತೋಟಿಯಲ್ಲಿ ಇಲ್ಲದಿದ್ದರೆ ಆಗ ಶರೀರದ ಎಲ್ಲಾ ಅಂಗಗಳಿಗಿಂತಲೂ ಹೃದಯ ಮತ್ತು ನಾಲಿಗೆಯೇ ಹೆಚ್ಚು ಕೆಟ್ಟವು ಅನಿಸಿಕೊಳ್ಳುತ್ತವೆ. ಮನುಷ್ಯರ ಗುಣ ಒಳ್ಳೆಯದೋ ಕೆಟ್ಟದ್ದೋ ಎಂದು ತಿಳಿಯಲು ಹೃದಯ ಹಾಗೂ ನಾಲಿಗೆಗಳೇ ಸರಿಯಾದ ಮಾನದಂಡಗಳು' ಎಂದ ಚಂದ್ರತೇಜ.

ಇಂತಹ ಅರ್ಥಗರ್ಭಿತ ಮಾತುಗಳನ್ನು ಕೇಳಿದ ಯಜಮಾನ ಚಂದ್ರತೇಜನ ಬುದ್ಧಿಶಕ್ತಿಗೆ ಸಂತಸಪಟ್ಟು ತನ್ನ ಎಲ್ಲಾ ವ್ಯವಹಾರದ ಉಸ್ತುವಾರಿ ವಹಿಸಿ ಸಾಕಷ್ಟು ಸಂಬಳ ಕೊಟ್ಟು ಹೆಚ್ಚಿನ ಅನುಕೂಲ ಮಾಡಿಕೊಟ್ಟ.

**-ವಿ. ಹೇಮಂತ ಕುಮಾರ್,**
**ಬೆಂಗಳೂರು**